communicated that suspension of mining lease would render investment insecure and operations uncertain and that the established export market would put to loss ಎನ್ನತಕ್ಕಂಥದ್ದು ಪ್ರಿಯಾಂಬಲ್‌ನಲ್ಲಿ ಸೇರಿಸಿ ಈ ಪದಗಳನ್ನು ಉಪಯೋಗ ಮಾಡಿ ಅಲ್ಲಿಂದ ಕಮ್ಯುನಿಕೇಷನ್ ಏನು ಬಂತಲ್ಲಾ, ಆ ಕಮ್ಯುನಿಕೇಷನ್ ಯಾರ ಒತ್ತಡದ ಮೇಲೆ ಬಂತು, ಏಕೆ ಬಂತು? ಅದು ಬಂದಮೇಲೆಯೇ ಈ ಆರ್ಡರನ್ನು ಇಸ್ಯೂ ಮಾಡುವ ಅವಶ್ಯಕತೆ ಏನಿತ್ತು ಎನ್ನುವುದು ಇದೆ. ಯಾವಾಗ ಈ ಮಾತುಗಳಿಗೆ ಅವರು ಬೆಂಬಲ ಕೊಡುತ್ತಿಲ್ಲ; ಮತ್ತು ಮುಂದೆ ಏನು ಹೇಳುತ್ತಾರೆ, taking note of this ಯಾವುದು ಎಂದರೆ ಮೇಲಿನದ್ದು Government of India vide their communication date.27.8.96 and 9-9-96. Taking note of this and also after deliberating with M/s. Gem Granites, the request of the Company was examined in all its aspects and reluctantly, the following orders were passed. ಅದಕ್ಕಾಗಿ ನಾನು ಹೇಳುವುದು ಏನೆಂದರೆ ಯಾವಾಗ ನೀವು ಎಲ್ಲವನ್ನೂ ಒಪ್ಪಿಕೊಂಡು ಅವರು ಹೇಳಿದ ಮಾತಿಗೆ ನೀವು ಬೆಂಬಲ ಕೊಟ್ಟು ಇವತ್ತು ಇದನ್ನು ಮಾಡಿದ್ದೀರಿ ಎಂದರೆ ಖಂಡಿತವಾಗಿಯೂ ನಾವು ಹೇಳಬೇಕಾಗುತ್ತದೆ. ಅದಕ್ಕೆ ನೀವು ರೂಲ್ಸ್ ವಯಲೇಟ್ ಮಾಡಿದ್ದೀರಿ, ಕಾನೂನನ್ನು ವಯಲೇಟ್ ಮಾಡಿದ್ದೀರಿ. ಜ್ಯೂರಿಸ್‌ಡಿಕ್ಷನ್ ಇರಲಾರದ ಕಡೆಯಲ್ಲಿ ನೀವು ಕೇಸನ್ನು ಹಾಕಿ ಅದನ್ನು ತಳ್ಳುತ್ತಿದ್ದೀರಿ, ಇದಕ್ಕಾಗಿ ಈ ಜೆಮ್ ಗ್ರಾನೈಟ್‌ನವರು ಇನ್‌ಫ್ಲುಯೆನ್ಸ್‌ನಲ್ಲಿ ಬಂದು ಈ ಒಂದು 27-3-97ರ ಆರ್ಡರನ್ನು ಹೊರಡಿಸಿದ್ದೀರಿ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಅದಕ್ಕೆ ಅವರು ಒಪ್ಪಿದ್ದಾರೆ. ಆದರೂ ಕೂಡ ನಾವು ಜಮೀನು ಉಳಿಸಿದ್ದೇವೆ ಎಂದು ಹೇಳಿಕೊಂಡು ಹೋಗುತ್ತಿದ್ದಾರೆ. ಯಾವಾಗ ಈ ಎನ್‌ಕ್ವೈರಿಗೆ ಅವರು ಒಪ್ಪುವುದಿಲ್ಲ ಎಂದರೆ ನಾವು ನಮ್ಮ ಮುಂದೆ ಯಾವ ಹಾದಿ ಇಲ್ಲ. ಪ್ರಜಾಪ್ರಭುತ್ವದಲ್ಲಿ ಆರ್ಗ್ಯುಮೆಂಟ್ ಮಾಡುತ್ತೇವೆ, ಅದನ್ನೂ ಅವರು ತಳ್ಳಿಹಾಕುತ್ತಾರೆ. ನಾವು ಅನೇಕ ನ್ಯೂನತೆಗಳನ್ನು ತೋರಿಸುತ್ತೇವೆ. ಅದನ್ನೂ ತಳ್ಳಿಹಾಕುತ್ತಾರೆ. ಎಲ್ಲಾ ಮಾಡಿದ್ದು ಸರಿ ಇದೆ ಎಂದು ಅವರು ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಈಗೇನು ಮಾಡಬೇಕು ಅಧ್ಯಕ್ಷರೇ. ತಾವು ಹೇಳಿ. ಇಂಥ ಮೊಂಡು ಸರ್ಕಾರದ ವಿರುದ್ಧ ನಾವು ಎಷ್ಟು ಎಂದು ವಾದ ಮಾಡುವುದಕ್ಕಾಗುತ್ತದೆ? ಅದಕ್ಕೆ ನಾವು ವಾಕ್‌ಔಟ್ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಸದಸ್ಯರುಗಳು ಸಭಾತ್ಯಾಗ ಮಾಡಿದರು. ಮತ್ತು ಬಾವಿಯಲ್ಲಿ ಶ್ರೀ ವಾಟಾಳ್ ನಾಗರಾಜ್ ಮತ್ತು ಶ್ರೀರಾಮರೆಡ್ಡಿಯವರು ಕುಳಿತಿದ್ದರು).

ಅಧ್ಯಕ್ಷರು: ಗುಲ್ಬರ್ಗ ಪರಿಷತ್ತಿನದ್ದು ಸ್ಟೇಟ್‌ಮೆಂಟ್ ಮಾಡುತ್ತೀರಾ? ಅವರು ವಾಕ್‌ಔಟ್ ಮಾಡಿ ವಾಪಸ್ ಬರುತ್ತಾರೆ. ಹೋಗಿ ಬಂದುಬಿಡಿ ಬೇಗ. ಮಾನ್ಯ